ಸಂದರ್ಭದಲ್ಲಿ ಅಂತಂದೆನಲ್ಲ, ಆ ಬಗ್ಗೆ ಹೇಳುವುದಾದರೆ – ದೊಡ್ಡ ಕತೆಯೇ ಆದೀತು... ಹಾಗಾಗಿ ವಿಸ್ತರಿಸುವುದು ಬೇಡ... ಸಣ್ಣದಾಗಿ ಹೇಳುವುದಾದರೆ, ನಾನು ಹತ್ತಾರು ಕಾಲ ಕೆಲಸಕ್ಕಿದ್ದ 'ಮಿಸ್ತ್ರಿ' ಆರ್ಕಿಟೆಕ್ಟ್ಸ್‌ನಿಂದಾಗಿ, ನನಗೆ ದಕ್ಕಿದ ಬಲು ಮೌಲಿಕವಾದ 'ಅಸೆಟ್ಟ್' ಅಂತೆಂದರೆ ಈತನೇ! ಪುಣ್ಯಾತ್ಮನಿಗೆ ಅದೆಂಥದೋ 'ಭಾರತೀಯತೆ' ಎಂಬುದರಲ್ಲಿ ಇನ್ನಿಲ್ಲದ ನಂಬುಗೆ. ಇದೇ ಮೇರೆಗೆ ಅಲೆಕ್ಸಂತೆಂಬ 'ಕಡು'ಕ್ರೈಸ್ತ ಹೆಸರನ್ನು ಪಕ್ಕಾ 'ಇಂಡಿಯನ್ನೈಸು'ಗೈದು, ಅಪ್ಪಟ ಭಾರತೀಯನೇ ಆಗಿಬಿಟ್ಟಿದ್ದಾನೆ! ಹೆಸರಿನೊಟ್ಟಿಗೆ 'ಬ್ರಹ್ಮ' ಅಂತೆಂಬ ಬಾಲಂಗೋಚಿ ಬೇರೆ! ಅಲೇಕ್ಷ್ಯ ಬ್ರಹ್ಮನೆಂದು ತಂತಾನೇ ಕರೆದುಕೊಳ್ಳುತ್ತಾನೆ... ಉಳಿದವರನ್ನೂ ಹಾಗೆಯೇ ಕರೆಯಹೇಳುತ್ತಾನೆ! ಇನ್ನುಳಿದಂತೆ ದಾಖಲೆಗಳಲ್ಲಿ ಅಲೆಕ್ಸ್ ವಿತ್ತಾಲೆ ಸಾಜನ್ ಅಂತೆಂಬ ಹೆಸರೇ ಇದೆ. ನನಗಿಂತಲೂ ಹತ್ತಾರು ವಯಸ್ಸಿಗೆ ಕಿರಿಯನಾದರೂ, ನನ್ನೊಡನೆ ಮುಕ್ತವಾಗಿ ಬೆರೆಯುತ್ತಾನೆ; ಮತ್ತು ನನ್ನ ವಯಸ್ಸನ್ನು ನಾನೇ ತಗ್ಗಿಸಿ ಕಾಣುವಂತೆ ಮಾಡಿದ್ದಾನೆ.

ಇಂತಹ ಅಲೇಕ್ಷ್ಯ ಬ್ರಹ್ಮನ ಕುರಿತಾಡುವಾಗ, ಎಂದೆಂದೂ ಮುಚ್ಚಿಡಲಾಗದ ಸತ್ಯವೊಂದಿದೆ; ನನ್ನ ಮತ್ತು ಮಧುಕರಿಯ ಬದುಕಿನಲ್ಲಿದೆ. ಸದ್ಯಕ್ಕೆ ಮದುವೆಯಾಗಿ ಮಾಸ್ಕೋದಲ್ಲಿ ಸೆಟಲ್ಲಾಗಿರುವ ನಮ್ಮ ಮಗಳು – ಐಕ್ಯಾಳ ವಿಷಯವೂ ಇದು ಹೌದು! ಈ ಕುರಿತು ಅಲೇಕ್ಷ್ಯನಿಗೆ ಈ ತನಕ ಗೊತ್ತಿಲ್ಲ. ಗೊತ್ತಾಗುವುದೂ ಬೇಡ. ಹಾಗೆ ನೋಡಿದರೆ, ಮಧುಕರಿಗೂ ಈ ವಿಚಾರವು ಇತ್ತೀಚಿನವರೆಗೆ ತಿಳಿದಿದ್ದಿಲ್ಲ. ನನಗೆ ಮತ್ತು ನನ್ನ ಮಗಳಿಗಲ್ಲದೆ ಇನ್ನಾರಿಗೂ ತಿಳಿದಿದ್ದಿಲ್ಲ. ಹೇಳುವುದಲ್ಲದೆ ಇನ್ನು ವಿಧಿಯಿಲ್ಲವೆಂಬಂತೊಂದು ನಾಜೂಕಿನ ಸಂದರ್ಭದಲ್ಲಿ, ಇದನ್ನು ಮಧುಕರಿಗೆ ತಿಳಿಸುವುದಾಯಿತು. ಅದರದ್ದೇ ಒಂದು ಕಥೆ!

ಐಕ್ಯಾಳನ್ನು ಅನಿರುತಂ ಅಂತೆಂಬ ಚೆನ್ನೈ ಕಡೆಯ ಐಯಂಗಾರಿ ಹುಡುಗನಿಗೆ ಕೊಟ್ಟಿದ್ದೇವೆ. ಕೊಡುವುದೆಲ್ಲಿ ಬಂತು, ಇವಳೇ ತಂತಾನು ಕಂಡುಕೊಂಡ ಹುಡುಗ. ನಮಗೆ ನೇರ ತಿಳಿಸದೆ, ತನ್ನ ತಾನು ಕೊಟ್ಟುಕೊಂಡಳೆಂಬುದು ಹೆಚ್ಚು ಸರಿ. ಹೀಗೆ ತನ್ನ ತಾನು ಸಮರ್ಪಿಸಿಕೊಳ್ಳುವುದರಲ್ಲಿ ನನ್ನ ಮಗಳು ಬಲು ನಿಪುಣೆಯೇ ಸರಿ! ಹೆಸರಿಗೆ ತಕ್ಕಂತೆ ಆಗಾಗ ಇನ್ನೊಬ್ಬರಲ್ಲಿ ಐಕ್ಯಗೊಳ್ಳುವ ಚಾಳಿ ಅವಳದ್ದು!! ನನ್ನ ಮೈಕೊನರುಂಟಾದವಳೇ ಆದರೂ, ಇದೊಂದು ವಿಷಯದಲ್ಲಿ ಅವಳು ನನ್ನ ಮಗಳಲ್ಲ. ಅವಳ ಆಂಗಿಕ, ಲೈಂಗಿಕ ಕೊಡು – ಕೊಳುಗಳನ್ನು ಸಂಭಾವಿತರಾದವರು ಒಪ್ಪುವುದಿಲ್ಲ. ಒಪ್ಪಲಾಗುವುದಿಲ್ಲ! ರೂಪದಲ್ಲಿ ತನ್ನ ಅಪ್ಪನನ್ನೇ ಹೆಚ್ಚು ಹೋಲುವ ಅವಳು, ಬುದ್ಧಿಯಲ್ಲಿ ಮಾತ್ರ ಅವನನ್ನು ಅನುಕರಿಸಲಿಲ್ಲ. ಬುದ್ಧಿಮತ್ತೆಯ ವಿಚಾರಕ್ಕೆ ಬಂದಾಗ ನನಗಿಂತಲೂ ಎಷ್ಟೋ ಎತ್ತರದಲ್ಲಿರುವ ಮಧುಕರಿಯನ್ನಿರಲಿ, ಅವನೆದುರು ಬೌದ್ಧಿಕವಾಗಿ ಬಲು ಕುಬ್ಜೆಯೆನಿಸುವ ನನ್ನನ್ನು ಕೂಡ, ಅವಳು ಮುಂದುವರೆಸಲಿಲ್ಲ. ನಮ್ಮಿಬ್ಬರಿಗೂ ಇಲ್ಲದ ಬುದ್ಧಿಗುಣ ಅವಳದ್ದು. ಹೇಗುಂಟಾಯಿತೋ ಆ ದೇವರೇ ಬಲ್ಲ! ನಮ್ಮಿಬ್ಬರಂತೆಯೇ ಆರ್ಕಿಟೆಕ್ಟಾದರೆ ಲೇಸೆಂದು – ಇಲ್ಲೇ ಒಂದು ಹೆಸರಾಂತ ಡಿಸೈನುಶಾಲೆಯಲ್ಲಿ, ತಕ್ಕ ಓದಿನಲ್ಲಿ ತೊಡಗಿಸಿದಾಗ ಅವಳು ಮುಗ್ಗರಿಸಿದ್ದೇ ಹೆಚ್ಚು. ಐದು ವರ್ಷದ ಕೋರ್ಸು ಮುಗಿಸಲಿಕ್ಕೆ ಎಂಟು ವಯಸ್ಸು ವ್ಯಯಿಸಿದಳು. ವರ್ಷ ವರ್ಷವೂ ಒಂದಲ್ಲೊಂದು ಸಬ್ಜೆಕ್ಟು ಡುಮುಕಿ! ಕಾಲೇಜಿನಲ್ಲಿ ಚೆನ್ನಾಗಿ ತೊಡಗಿದ್ದಾಳೆಂಬ ನಮ್ಮ ನಂಬಿಕೆಯೇ ಸೋಗೆನಿಸುವಂತೆ ಮಾಡಿಬಿಟ್ಟಳು. ಮೂರನೇ ವರ್ಷದಲ್ಲಿರುವಾಗ, ತನ್ನೊಬ್ಬ ನಡುವಯಸ್ಕ ಮೇಷ್ಟರೊಂದಿಗೆ ಮೋಹಪಾಶದಲ್ಲಿ ಸಿಲುಕಿ ಅನಾಹುತವಾಗಿ.... ಪಡಬಾರದ ಪಟ್ಟು ಪಟ್ಟಿದ್ದಾಯಿತು... ಛೇ... ಆ ಕುರಿತು ಆಡುವುದೇ ಬೇಡ. ಆಡಿದರೆ ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನೇ ಬಿಟ್ಟುಕೊಡುವುದಾಗುವುದು! 'ಏನೇ ಐಕೀ?